**ಪತ್ರಿಕಾ ಪ್ರಕಟಣೆ**

**ಕೋವಿಡ್-19 ಮತ್ತು ಬೆಂಗಳೂರು ನಗರದ ಬಡವರು: ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಕೈಗೊಂಡ ಕೋವಿಡ್ ಸಾಂಕ್ರಾಮಿಕದ ಪರಿಣಾಮಗಳ ಕುರಿತ ಸಮೀಕ್ಷೆಯ ಪ್ರಮುಖ ಅಂಶಗಳ ಬಿಡುಗಡೆ**

ಮಂಗಳವಾರ, 2022 ರ ಮಾರ್ಚ್ 29 ರಂದು ಬಿಡುಗಡೆಗಾಗಿ

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಒಂಬತ್ತು ನಾಗರಿಕ ಸಾಮಾಜಿಕ ಸಂಘಟನೆಗಳ ಸಹಯೋಗದೊಂದಿಗೆ ಬೆಂಗಳೂರಿನ 33 ವಾರ್ಡ್ ಗಳ ವ್ಯಾಪ್ತಿಯಲ್ಲಿ ಬರುವ 92 ಕಡಿಮೆ ಆದಾಯವುಳ್ಳ ವಸತಿ ಪ್ರದೇಶಗಳಲ್ಲಿನ 3,000 ಕುಟುಂಬಗಳನ್ನು ಒಳಗೊಂಡ ಸಮೀಕ್ಷೆಯನ್ನು ಕೈಗೊಂಡಿತು. ಕೋವಿಡ್-19 ರ ಸಲುವಾಗಿ ವಿಧಿಸಲಾದ ಲಾಕ್‌ಡೌನ್‌ಗಳು ಮತ್ತು ಅವು ಜನರ ಉದ್ಯೋಗ ಮತ್ತು ಜೀವನೋಪಾಯಗಳ ಮೇಲೆ ಬೀರುತ್ತಿರುವ ಆರ್ಥಿಕ ದುಸ್ತರತೆಯ ಪರಿಣಾಮಗಳ ಸ್ವರೂಪವನ್ನು ಪರಿಶೀಲಿಸುವುದು ಈ ಸಮೀಕ್ಷೆಯ ಉದ್ದೇಶವಾಗಿತ್ತು. ಜೊತೆಗೆ, ಸರ್ಕಾರದ ನೆರವಿನ ಲಭ್ಯತೆ ಹಾಗೂ ಜನರು ಈ ಸಂಕಷ್ಟದ ಕಾಲವನ್ನು ನಿಭಾಯಿಸಿದ ವಿಧಾನಗಳ ಬಗ್ಗೆಯೂ ಈ ಸಮೀಕ್ಷೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಯಿತು. ಸಮೀಕ್ಷೆಯಲ್ಲಿ ಒಳಗೊಂಡ ಜನರಲ್ಲಿ ವೈವಿಧ್ಯಮಯ ಉದ್ಯೋಗಗಳಲ್ಲಿ ತೊಡಗಿರುವ ವಾಹನ ಚಾಲಕರು (ಟ್ಯಾಕ್ಸಿ, ಆಟೋ, ಮತ್ತು ಇತರೆ), ದಿನಗೂಲಿ ನೌಕರರು (ಕಟ್ಟಡ ನಿರ್ಮಾಣ ಮತ್ತು ಇತರೆ), ಮನೆಗೆಲಸದವರು ಮತ್ತು ಕಾರ್ಖಾನೆಗಳ ಕಾರ್ಮಿಕರು (ಗಾರ್ಮೆಂಟ್ ಮತ್ತು ಇತರೆ) ಇದ್ದರು. ಸಮೀಕ್ಷೆಯನ್ನು 2021 ರ ನವೆಂಬರ್ ನಲ್ಲಿ ಆಕ್ಷನ್ ಏಯ್ಡ್, ಅಸೋಸಿಯೇಶನ್ ಫಾರ್ ಪ್ರೊಮೋಟಿಂಗ್ ಸೋಶಿಯಲ್ ಆಕ್ಷನ್ (APSA), ದಿ ಸೆಂಟರ್ ಫಾರ್ ಅಡ್ವೊಕೆಸಿ ಅಂಡ್ ರಿಸರ್ಚ್ (CFAR), ಹಸಿರು ದಳ, ಗುಬ್ಬಚ್ಚಿ, ರೀಚಿಂಗ್ ಹ್ಯಾಂಡ್, ಸಂಗಮ, ಸ್ವಾಭಿಮಾನ್ ಟ್ರಸ್ಟ್ ಹಾಗೂ ತಮಟೆ - ಈ ಸಂಘಟನೆಗಳ ನೆರವಿನೊಂದಿಗೆ ನಡೆಸಲಾಯಿತು.

ಈ ಸಮೀಕ್ಷೆಯ ಪ್ರಮುಖ ಅಂಶಗಳನ್ನು ಬೆಂಗಳೂರಿನ ಗಾಂಧಿ ಭವನದಲ್ಲಿ ಮಾರ್ಚ್ 29, ಮಂಗಳವಾರದಂದು ಬೆಳಿಗ್ಗೆ 11 ಗಂಟೆಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬಿಡುಗಡೆಗೊಳಿಸಲಾಯಿತು. ಸಮೀಕ್ಷೆಯ ಪ್ರಮುಖ ಅಂಶಗಳ ಪ್ರಸ್ತುತಿಯ ನಂತರ ನಾಗರಿಕ ಸೇವಾ ಅಧಿಕಾರಿಗಳು, ಸಮೀಕ್ಷೆಯಲ್ಲಿ ಭಾಗಿಯಾದ ಸಂಘಟನೆಗಳ ಸದಸ್ಯರು ಮತ್ತು ಸಮುದಾಯಗಳ

ಪ್ರತಿನಿಧಿಗಳೊಂದಿಗೆ ಸಂವಾದ ನಡೆಯಿತು. ಸಮೀಕ್ಷೆಯ ವಿಸ್ತೃತ ವರದಿಯನ್ನು ನಂತರ ಬಿಡುಗಡೆ ಮಾಡಲಾಗುವುದು.

ಸಮೀಕ್ಷೆಯ ಪ್ರಮುಖ ಅಂಶಗಳನ್ನು ಬಿಡುಗಡೆಗೊಳಿಸಿದ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸುಸ್ಥಿರ ಉದ್ಯೋಗ ಕೇಂದ್ರದ ಮುಖ್ಯಸ್ಥರೂ, ಸಮೀಕ್ಷಾ ತಂಡದ ಮುಖ್ಯ ಸಂಶೋಧಕರೂ ಆದ ಅಮಿತ್ ಬಸೋಲೆಯವರು “ಜನರ ಜೀವನೋಪಾಯದ ಮೇಲಿನ ಸಾಂಕ್ರಾಮಿಕದ ದುಷ್ಪರಿಣಾಮಗಳು ಲಾಕ್ ಡೌನ್ ಅವಧಿಯ ನಂತರವೂ ಮುಂದುವರೆದಿವೆ. ನಿರ್ದಿಷ್ಟವಾಗಿ, ಸಮಾಜದ ಅವಕಾಶವಂಚಿತ ವರ್ಗಗಳಿಗೆ  ಬದುಕು ಇನ್ನೂ ದುಸ್ತರವಾಗಿದೆ. ಈ ಬಿಕ್ಕಟ್ಟಿನಿಂದ ಜನರು ಹೊರಬರುವಂತಾಗಲು ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ದೀಘಾವಧಿ ಪರಿಣಾಮವುಳ್ಳ ನಿರ್ದಿಷ್ಟ ನೀತಿಯನ್ನು ರೂಪಿಸುವ ಅಗತ್ಯವಿದೆ” ಎಂದು ಹೇಳಿದರು.

“ನಮ್ಮ ನಗರಗಳಲ್ಲಿ ವಾಸಿಸುವ ಬಡವರು ಹೇಗೆ ನಮ್ಮ ಕಣ್ಣಿಗೆ ಅದೃಶ್ಯರಾಗಿದ್ದಾರೆ, ನಮ್ಮ ಸಾರ್ವಜನಿಕ ವ್ಯವಸ್ಥೆಗಳು ಅಗತ್ಯವುಳ್ಳವರು ಮತ್ತು ಅತ್ಯಂತ ದುರ್ಬಲರನ್ನು ತಲುಪುವಲ್ಲಿ ಹೇಗೆ ನಿತ್ರಾಣವಾಗಿವೆ ಎನ್ನುವುದನ್ನು ಕೋವಿಡ್ ಸಾಂಕ್ರಾಮಿಕ ತೋರಿಸಿದೆ” ಎಂದು ಅಜೀಂ ಪ್ರೇಮ್‌ಜಿ ಫೌಂಡೇಷನ್ ನ ಕೋವಿಡ್ ಪ್ರತಿಸ್ಪಂದನಾ ತಂಡದ ಪ್ರಮುಖ ಸದಸ್ಯರಾದ ಹೈಮಾ ವಡ್ಲಮನಿ ಹೇಳಿದರು. ಈ ಸಮೀಕ್ಷೆಯ ಫಲಿತಗಳಿಂದ ಹೊಮ್ಮಿದ ಅಂಶಗಳನ್ನಾಧರಿಸಿ ವ್ಯವಸ್ಥಿತವಾಗಿ ಅಸಮಾನತೆಯನ್ನು ಕಡಿಮೆ ಮಾಡಲು ನಗರಾಡಳಿತ ವ್ಯವಸ್ಥೆಯನ್ನು ಮರುರೂಪಿಸುವುದಕ್ಕೆ ಜರೂರಾಗಿ ಮುಂದಾಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

**ಸಮೀಕ್ಷೆಯ ಮುಖ್ಯ ಫಲಿತಗಳು:**

1. 2020ರ ಲಾಕ್ ಡೌನ್ ಅವಧಿಯ ನಂತರವೂ ಉದ್ಯೋಗ ಮತ್ತು ಆದಾಯ ನಷ್ಟಗಳು ಮುಂದುವರೆದಿವೆ. ಜನವರಿ/ ಫೆಬ್ರವರಿ 2021ರಲ್ಲಿ ಕೂಡ 41% ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಲ್ಲದೆ, 21% ರಷ್ಟು ಜನರ ಆದಾಯ ಕುಂಠಿತವಾಗಿತ್ತು. ದಿನಗೂಲಿ ಕಾರ್ಮಿಕರು, ಮನೆಗೆಲಸ ಮಾಡುವವರು ಮತ್ತು ಚಿಲ್ಲರೆ ವ್ಯಾಪಾರ ರಂಗದಲ್ಲಿ ತೊಡಗಿರುವ ಶ್ರಮಿಕರು ಅತ್ಯಂತ ಹೆಚ್ಚಿನ ಹಾನಿಗೊಳಗಿದ್ದಾರೆ.

2. ನಿರುದ್ಯೋಗವು ದೀರ್ಘಾವಧಿಯದ್ದಾಗಿತ್ತು. ಸಾಂಕ್ರಾಮಿಕವು ಶುರುವಾಗಿ ಒಂದು-ಒಂದೂವರೆ ವರ್ಷಗಳ ನಂತರವೂ, ಅಂದರೆ 2021ರ ಅಕ್ಟೋಬರ್ ನಲ್ಲಿ ಗಣನೀಯ ಪ್ರಮಾಣದ ಜನರು (10% ಪುರುಷರು, 15% ಮಹಿಳೆಯರು) ಉದ್ಯೋಗ ಕಳೆದುಕೊಂಡ ಸ್ಥಿತಿ ಮುಂದುವರೆದಿತ್ತು.

3. ಆದಾಯ ನಷ್ಟದ ಸ್ಥಿತಿಯೂ ದೀರ್ಘಾವಧಿಯದ್ದಾಗಿತ್ತು. ಸಾಂಕ್ರಾಮಿಕದ ಪೂರ್ವದಲ್ಲಿಯೇ ಕಡಿಮೆಯಿದ್ದ ಮಾಸಿಕ ಆದಾಯವು (ಮಾಸಿಕ 9400 ರೂ.ಗಳು) ಇನ್ನೂ ಇಳಿಕೆಯಾಯಿತು (2021 ರ ಜನವರಿ/ಫೆಬ್ರವರಿಯಲ್ಲಿ ಮಾಸಿಕ 8450 ರೂ.ಗಳು). 2021 ರ ಅಕ್ಟೋಬರ್ ವೇಳೆಗೆ ಆದಾಯದಲ್ಲಿ ಸ್ವಲ್ಪ ಮಟ್ಟಿನ ಚೇತರಿಕೆ ಆಯಿತಾದರೂ, ನಂತರದ ಹಣದುಬ್ಬರದ ಪ್ರಮಾಣವನ್ನು ಪರಿಗಣಿಸಿದರೆ, ಆದಾಯವು ಕೋವಿಡ್ ಪೂರ್ವ ಅವಧಿಗಿಂತ ಕಡಿಮೆ ಪ್ರಮಾಣದಲ್ಲಿ ಮುಂದುವರೆಯಿತು. ಅಂದರೆ ಸಮೀಕ್ಷೆಗೆ ಒಳಪಟ್ಟ ಕುಟುಂಬಗಳು ಹೆಚ್ಚುಕಮ್ಮಿ 19 ತಿಂಗಳುಗಳ ಕಾಲ ಉದ್ಯೋಗ ಮತ್ತು ಆದಾಯದ ನಷ್ಟಗಳನ್ನು ಅನುಭವಿಸಿವೆ.

4. ಕೋವಿಡ್ ಪೂರ್ವದಲ್ಲಿಯೇ ಹೆಚ್ಚಿದ್ದ ಬಡತನದ ಪ್ರಮಾಣವು ನಂತರ ಇನ್ನೂ ಹೆಚ್ಚಾಯಿತು. ಅನೂಪ್ ಸತ್ಪತಿ ಸಮಿತಿ ಶಿಫಾರಸು ಮಾಡಿದ್ದ ರಾಷ್ಟ್ರೀಯ ಕನಿಷ್ಠ ವೇತನಕ್ಕಿಂತ (ದಿನಕ್ಕೆ ಪ್ರತಿ ವ್ಯಕ್ತಿಗೆ 119 ರೂ.ಗಳು) ಕಡಿಮೆ ಆದಾಯವುಳ್ಳ ಕುಟುಂಬಗಳ ಶೇಕಡಾವಾರು ಪ್ರಮಾಣ ಸುಮಾರು 80% ಕ್ಕೆ ಏರಿಕೆಯಾಗಿ ಅಕ್ಟೋಬರ್ 2021 ರ ವೇಳೆಗೆ ಕೋವಿಡ್ ಪೂರ್ವ ಅವಧಿಯ ಪ್ರಮಾಣ, ಅಂದರೆ 67% ನ್ನು ತಲುಪಿತು.

5. ಆಹಾರದ ಅಭದ್ರತೆ ತೀವ್ರವಾಗಿ ಏರಿದೆ. ಅಕ್ಟೋಬರ್ 2021 ರಲ್ಲಿ ಕೂಡ, 40% ಕುಟುಂಬಗಳ ಜನರು, ಕೋವಿಡ್ ಪೂರ್ವ ಸಮಯದಲ್ಲಿ ಸೇವಿಸುತ್ತಿದ್ದ ಆಹಾರ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದ ಆಹಾರವನ್ನು ಸೇವಿಸುತ್ತಿದ್ದೇವೆ ಎಂದಿದ್ದಾರೆ.

6. ಕುಟುಂಬಗಳು ಸಂಕಟದ ಪರಿಸ್ಥಿತಿಯನ್ನು ನಿಭಾಯಿಸಿಲು ಸಾಲ ಪಡೆದಿರುವುದಲ್ಲದೆ ತಮ್ಮ ಸ್ವತ್ತುಗಳನ್ನು ಮಾರಿಕೊಳ್ಳಬೇಕಾಯಿತು. 11% ಕುಟುಂಬಗಳು ನಿತ್ಯದ ಖರ್ಚಿಗೆ ಮತ್ತು ಹಳೆಯ ಸಾಲಗಳನ್ನು ತೀರಿಸುವುದಕ್ಕಾಗಿ (ಮುಖ್ಯವಾಗಿ ಅನೌಪಚಾರಿಕ ಮೂಲಗಳಿಂದ) ಸಾಲ ಪಡೆಯಬೇಕಾಯಿತು. 15% ರಷ್ಟು ಹೆಚ್ಚುವರಿ ಕುಟುಂಬಗಳು ತಮ್ಮ ಒಡವೆಗಳನ್ನು ಮಾರಿ ಅಥವಾ ಗಿರವಿಯಿಟ್ಟು ತಮ್ಮ ದೈನಂದಿನ ವೆಚ್ಚವನ್ನು ನಿಭಾಯಿಸಬೇಕಾಯಿತು. ಇನ್ನೂ 12% ರಷ್ಟು ಹೆಚ್ಚುವರಿ ಕುಟುಂಬಗಳು ಅವಶ್ಯಕತೆಯಿದ್ದಾಗಲೂ ಸಾಲ ಪಡೆಯಲಾಗಲಿಲ್ಲ.

7. ಸಾರ್ವಜನಿಕ ವಿತರಣಾ ವ್ಯವಸ್ಥೆಯು (ರೇಶನ್) ಅತಿ ಮುಖ್ಯ ರಕ್ಷಾಕವಚವಾಗಿತ್ತು. ಎರಡನೆಯ ಲಾಕ್‌ಡೌನ್ ನಂತರ ಬಿಪಿಎಲ್ ಕಾರ್ಡುಗಳನ್ನು ಹೊಂದಿದ್ದ 55% ಕುಟುಂಬಗಳು ತಾವು ಸಾಮಾನ್ಯ ಸಂದರ್ಭಗಳಲ್ಲಿ ಪಡೆಯುತ್ತಿದ್ದ ಪ್ರಮಾಣಕ್ಕಿಂತಲೂ ಅಧಿಕ ಪ್ರಮಾಣದ ಧಾನ್ಯಗಳನ್ನು ಕೋವಿಡ್ ಸಮಯದ ಎಲ್ಲಾ ತಿಂಗಳುಗಳಲ್ಲಿಯೂ ಪಡೆದೆವು ಎಂದು ಹೇಳಿವೆ. ಮತ್ತೆ 32% ರಷ್ಟು ಕುಟುಂಬಗಳು ಕೊನೆಪಕ್ಷ ಕೆಲವು ತಿಂಗಳುಗಳವರೆಗೆ ಅಧಿಕ ಧಾನ್ಯಗಳನ್ನು ಪಡೆದಿದ್ದುದಾಗಿ ತಿಳಿದು ಬಂದಿದೆ.

8. ನಗದು ವರ್ಗಾವಣೆಗಳು ಬಹಳ ಜನರನ್ನು ತಲುಪಲಿಲ್ಲ. 78% ಕುಟುಂಬಗಳಲ್ಲಿ ಮಹಿಳೆಯರ ಹೆಸರಿನಲ್ಲಿ ಜನಧನ್ ಖಾತೆಯಿರಲಿಲ್ಲ. ಖಾತೆಗಳನ್ನು ಹೊಂದಿದ್ದವರಲ್ಲಿ 75% ಕುಟುಂಬಗಳು ತಮ್ಮ ಖಾತೆಗೆ ಸ್ವಲ್ಪ ಹಣವಾದರೂ ಜಮಾ ಆಗಿದೆ ಎಂದು ಹೇಳಿವೆ. 40% ಕುಟುಂಬಗಳು ಪೂರ್ಣ ಮೊತ್ತವಾದ 1500 ರೂ.ಗಳು ಜಮಾ ಆಗಿದೆ ಎಂದು ಹೊರಗೆಡಹಿದ್ದಾರೆ.

9. ಕರ್ನಾಟಕ ಸರ್ಕಾರವು ಘೋಷಿಸಿದ ನಗದು ವರ್ಗಾವಣೆ ಯೋಜನೆಗಳಡಿಯಲ್ಲಿ ಕೇವಲ 3% ಕುಟುಂಬಗಳು ನೆರವು ದೊರಕಿರುವುದನ್ನು ತಿಳಿಸಿವೆ.

10. ಸಾಂಕ್ರಾಮಿಕದ ಕಾಲದಲ್ಲಿ ಮಧ್ಯಾಹ್ನದ ಬಿಸಿಯೂಟ ಮತ್ತು ಐಸಿಡಿಎಸ್ ಅನುಷ್ಠಾನದಲ್ಲಿ ಸ್ವಲ್ಪ ಮಟ್ಟಿನ ಸುಧಾರಣೆ ಕಂಡು ಬಂದಿದೆ. 6 ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳಿರುವ ಅಥವಾ ಗರ್ಭಿಣಿ/ಹಾಲುಣಿಸುವ ಮಹಿಳೆಯರಿರುವ ಕುಟುಂಬಗಳಿಗೆ ದೊರಕುವ ಪೂರಕ ಪೋಷಕಾಂಶಗಳು ಮತ್ತು ಪರ್ಯಾಯಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ ಕೋವಿಡ್ ಪೂರ್ವದಲ್ಲಿ 24% ಇದ್ದದ್ದು 38% ಏರಿಕೆಯಾಯಿತು.

ಸಾಂಕ್ರಾಮಿಕದಿಂದ ಜನರ ಜೀವನೋಪಾಯದ ಮೇಲೆ ಉಂಟಾದ ಪರಿಣಾಮಗಳು ಲಾಕ್‌ಡೌನ್‌ಗಳ ನಂತರವೂ ಮುಂದುವರೆದುಕೊಂಡು ಬಂದಿರುವುದನ್ನು ಸಮೀಕ್ಷೆಯ ಫಲಿತಗಳು ತೋರಿಸಿವೆ. ಇನ್ನೂ ಹೆಚ್ಚಿನ ಪ್ರಮಾಣದ ಬೆಂಬಲ ಸಿಗದೆ ಇದ್ದರೆ ಸುದೀರ್ಘ ಅವಧಿಯವರೆಗೆ ಆದಾಯ ನಷ್ಟವಾಗಿರುವುದು, ಕಡಿಮೆ ಆಹಾರ ಸೇವನೆ, ಸಾಲ ಅಥವಾ ಸ್ವತ್ತುಗಳನ್ನು ಮಾರಿಕೊಂಡಿರುವುದು ಇವೆಲ್ಲ ಸಾಂಕ್ರಾಮಿಕದ ಪರಿಣಾಮದಿಂದ ಈ ಕುಟುಂಬಗಳು ಚೇತರಿಸಿಕೊಳ್ಳುವ ಸಾಮರ್ಥ್ಯಕ್ಕೆ ತಡೆಯಾಗುತ್ತದೆ. ನಗರದ ಬಡ ಜನತೆಯನ್ನು ತಲುಪುವ ನಿಟ್ಟಿನಲ್ಲಿ ಪರಿಹಾರೋಪಾಯಗಳು ಮಿಶ್ರ ಫಲಿತಾಂಶಗಳನ್ನು ನೀಡಿವೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯು ವಿಸ್ತೃತ ವ್ಯಾಪ್ತಿಯುಳ್ಳದ್ದೆಂದು ಸ್ಪಷ್ಟವಾಯಿತು. ನಗದು ವರ್ಗಾವಣೆಗಳು ಕಡಿಮೆ ಜನರನ್ನು ತಲುಪಿವೆ ಮತ್ತು ಅಗತ್ಯವಿದ್ದುದಕ್ಕಿಂತ ಕಡಿಮೆ ಸಂದಾಯವಾಗಿದೆ. ಮುಂದಿನ ಕ್ರಮಗಳ ಬಗೆಗೆ ಆಲೋಚಿಸುವುದಾರೆ, ಈ ಪರಿಣಾಮಗಳನ್ನು ಎದುರಿಸಲು ಮತ್ತು ಎಲ್ಲಾ ವರ್ಗಗಳನ್ನು ಒಳಗೊಳ್ಳುವಂತೆ ಆರ್ಥಿಕ ಪುನಶ್ಚೇತನದ ಹಾದಿಯೊಂದನ್ನು ರೂಪಿಸುವ ತತ್‌ಕ್ಷಣದ ಅವಶ್ಯಕತೆಯಿದೆ; ಮಧ್ಯಮಾವಧಿಯಿಂದ ದೀರ್ಘಾವಧಿವರೆಗೆ ಅನ್ವಯಿಸುವ ಸೂಕ್ತ ನೀತಿಯನ್ನು ರೂಪಿಸಬೇಕಾದ ಅಗತ್ಯವಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ವಿತರಿಸಲಾಗುತ್ತಿರುವ ಹೆಚ್ಚುವರಿ ಪ್ರಮಾಣದ ರೇಶನ್ ವಿತರಣೆಯನ್ನು (ಇದೀಗ ಇನ್ನೂ ಆರು ತಿಂಗಳುಗಳವರೆಗೆ ವಿಸ್ತರಿಸಲಾಗಿದೆ) ಮುಂದುವರೆಸಬೇಕು. ಜೊತೆಗೆ ಇನ್ನೂ ಹೆಚ್ಚಿನ ಪ್ರಮಾಣದ ನಗದು ವರ್ಗಾವಣೆ ಮತ್ತು ನಗರಗಳನ್ನು ಕೇಂದ್ರೀಕರಿಸಿದ ಒಂದು ಉದ್ಯೋಗ ಖಾತರಿ ಯೋಜನೆ – ಇವೆರಡನ್ನೂ ಒಳಗೊಂಡ ಒಂದು

ನೀತಿಯನ್ನು ರೂಪಿಸುವ ತುರ್ತು ಅಗತ್ಯವಿದೆ. ಈ ದಿಶೆಯಲ್ಲಿ, ಮುಖ್ಯವಾಗಿ ರಾಜ್ಯ ಮಟ್ಟದಲ್ಲಿ ಅಗತ್ಯವಿರುವ ನೀತಿ ರೂಪಣೆಯ ಮಧ್ಯಸ್ಥಿಕೆಗಳ ವ್ಯಾಪ್ತಿ ಮತ್ತು ಸ್ವರೂಪವನ್ನು ನಿರ್ಧರಿಸುವಲ್ಲಿ ಈ ಸಮೀಕ್ಷೆಯ ಫಲಿತಗಳು ನೆರವಾಗುತ್ತವೆ ಎಂದು ನಿರೀಕ್ಷಿಸಲಾಗಿದೆ.

ಈ ಕುರಿತ ಇನ್ನೂ ಹೆಚ್ಚಿನ ಮಾಹಿತಿಯು ಇಲ್ಲಿ ಲಭ್ಯವಿದೆ: https://cse.azimpremjiuniversity.edu.in/cse-surveys-bengaluru-covid-impact-survey/


**ಮಾಧ್ಯಮಕ್ಕೆ ಸಂಬಂಧಿಸಿದ ಮಾಹಿತಿಗಾಗಿ ಇವರನ್ನು ಸಂಪರ್ಕಿಸಿ:**

**ಅಮಿತ್ ಬಸೋಲೆ** - amit.basole@apu.edu.in | +91-96196 49958

**ಗೌರವ್ ಗುಪ್ತ -** gaurav.gupta@apu.edu.in | +91-8971772597

**ಶಿವಾನಿ ನಾಯಕ್ -** shivani.naik@k2communications.in | +91 97498 97597


## ಅಜೀಂ ಪ್ರೇಮ್ ವಿಶ್ವವಿದ್ಯಾಲಯ

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು 2010 ರ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಕಾಯಿದೆಯಡಿಯಲ್ಲಿ ಲಾಭೋದ್ದೇಶವಿಲ್ಲದ ಒಂದು ಖಾಸಗಿ ವಿಶ್ವವಿದ್ಯಾಲಯವಾಗಿ ಸ್ಥಾಪಿಸಲ್ಪಟ್ಟಿದೆ. ವಿಶ್ವವಿದ್ಯಾಲಯವು ನ್ಯಾಯಯುತ, ಸಮಾನ, ಮಾನವೀಯ ಮತ್ತು ಸುಸ್ಥಿರ ಸಮಾಜವೊಂದನ್ನು ಸಾಕಾರಗೊಳಿಸುವ ಸ್ಪಷ್ಟವಾದ ಸಾಮಾಜಿಕ ಉದ್ದೇಶವನ್ನು ಹೊಂದಿದೆ. ಹೊಸ ಪ್ರತಿಭೆಗಳನ್ನು ರೂಪಿಸುವಲ್ಲಿ, ಪ್ರಸ್ತುತ ಸೇವೆಯಲ್ಲಿರುವ ಅಧಿಕಾರಿಗಳ ಸಾಮರ್ಥ್ಯವನ್ನು ಬೆಳೆಸುವಲ್ಲಿ, ಹಾಗೂ ಶಿಕ್ಷಣ ಮತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ಜ್ಞಾನ ನಿರ್ಮಾಣದಲ್ಲಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ. ಅಜೀಂ ಪ್ರೇಮ್‌ಜಿ ಫೌಂಡೇಷನ್ ಈ ವಿಶ್ವವಿದ್ಯಾಲಯದ ಪೋಷಕ ಸಂಸ್ಥೆಯಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಣದಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್ ದಶಕಕ್ಕಿಂತ ಹೆಚ್ಚಿನ ಕಾಲ ತೊಡಗಿ, ಅದರಿಂದ ಪಡೆದ ಕಲಿಕೆ ಮತ್ತು ಅನುಭವಗಳ ಫಲವಾಗಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ರೂಪುಗೊಂಡಿದೆ. ಶಿಕ್ಷಣ ಮತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ಭಾರತ ಎದುರಿಸುತ್ತಿರುವ ಸವಾಲುಗಳಿಗೆ ಫೌಂಡೇಷನ್ ನೀಡುತ್ತಿರುವ ಪ್ರಮುಖ ಸ್ಪಂದನೆಗಳಲ್ಲಿ ವಿಶ್ವವಿದ್ಯಾಲಯವು ಪ್ರಮುಖವಾಗಿದೆ.